# ನಕ್ಕುಬಿಡಿ



ಒಬ್ಬ ಟೈಲರ್ ಊರಿನ ಬಟ್ಟೆಯನ್ನೆಲ್ಲಾ ಗಂಟುಮೂಟೆ ಕಟ್ಟಿಕೊಂಡು ಓಡಿಹೋದ.

ಎಲ್ಲರೂ ಪೊಲೀಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಡಲು ಹೋದರು. ನಮ್ಮ ಶರ್ಟ್ ಪೀಸ್ ಕದ್ದೊಯ್ದಿದ್ದಾನೆ. ನನ್ನ ಪ್ಯಾಂಟ್ ಪೀಸ್, ಮತ್ತೊಬ್ಬರು ನನ್ನ ಸೂಟ್ ಬಟ್ಟೆ ಸರ್, ನನ್ನ ಪೈಜಾಮಾ ಎಂದೆಲ್ಲಾ ಕಂಪ್ಲೇಂಟ್‌ಗಳ ಸುರಿಮಳೆಯೆ ಆಯಿತು.

ಸುಮ್ಮನೆ ಇದ್ದ ತಿಮ್ಮನನ್ನು ಪೊಲೀಸರು 'ಲೇ ತಿಮ್ಮ ನಿಂದು ಏನು ತಗೊಂಡು ಹೋಗಿದ್ದಾನೆ?

ತಿಮ್ಮ: ನಂದು ಮೆಸರ್ಮೆಂಟ್ ಸಾರ್.

ಸಂದರ್ಶಕ: ನಿಮ್ಮ ಬಿಡುಗಡೆಯಾದ ಹೊಸ ಸಿನೆಮಾದ ಬಗ್ಗೆ ಹೇಳ್ತೀರಾ?

ನಿರ್ದೇಶಕ: ಕೆಲವರಿಗೆ ಇಷ್ಟವಾಗಿದೆ ಕೆಲವರಿಗೆ ಇಲ್ಲ.

ಸಂದರ್ಶಕ: ನಿಮ್ಮ ಮಾತಿನ ಅರ್ಥ

ನಿರ್ದೇಶಕ: ನಮಗೆ ಇಷ್ಟವಾಗಿದೆ ಪ್ರೇಕ್ಷಕರಿಗೆ ಇಲ್ಲ.

★★★

ಪುಸ್ತಕ ನೋಡಿಕೊಂಡು ಅಡುಗೆ ಮಾಡಿದ ಹೆಂಡತಿ ಗಂಡನಿಗೆ ರುಚಿ ನೋಡಲು ಹೇಳಿದಳು.

ರುಚಿ ನೋಡಿದ ಗಂಡ ನಿಂದೇನು ತಪ್ಪಿಲ್ಲ ಬಿಡು ಎಲ್ಲಾ ಪುಸ್ತಕ ಬರದವರದ್ದೆ ತಪ್ಪು ಎಂದ.

★★★

ರಾಮು: ನನ್ನ ಡಿಕ್ಷನರಿಯಲ್ಲಿ ಅಸಾಧ್ಯ ಅನ್ನೊ ಪದಾವೇ ಇಲ್ಲ ಗೊತ್ತಾ?

ಶಾಮು: ಈಗ ಹೇಳಿದ್ರೆ ಏನು ಪ್ರಯೋಜನ ತಗೊಳ್ಳುವಾಗಲೇ ನೋಡಿ ತಗೊಳಬೇಕಾಗಿತ್ತು.

★★★

ಗಂಡ: ಇಂದು ನಮ್ಮ ಮದುವೆ ವಾರ್ಷಿಕೋತ್ಸವ ಅಲ್ವಾ ಏನು ಗಿಫ್ಟ್ ಬೇಕು?

ಹೆಂಡತಿ: ನಾನು ಇದುವರೆಗೂ ನೋಡಿರಬಾರದು ಅಂತಹ ಜಾಗಕ್ಕೆ ಕರೆದುಕೊಂಡು ಹೋಗಿ

ಗಂಡ: ಬಾ ಹಾಗಾದ್ರೆ ಅಡುಗೆ ಮನೆಗೆ ಹೋಗೋಣ.

★★★

ಅಪ್ಪ: ಯಾಕೆ ಅಳ್ತಾ ಇದ್ದಿಯಾ?

ಮಗ: ಶಾಲೆಯಲ್ಲಿ ಟೀಚರ್ ಹೊಡೆದ್ರು

ಅಪ್ಪ: ನೀನು ಏನಾದ್ರು ತರಲೆ ಮಾಡಿರ್ತಿಯಾ ಅದಕ್ಕೆ ಹೊಡೆದಿರುತ್ತಾರೆ.

ಮಗ: ಇಲ್ಲ ಅಪ್ಪ ನನ್ನ ಪಾಡಿಗೆ ನಾನು ನಿದ್ದಿ ಮಾಡುತ್ತಿದ್ದೆ ಆದ್ರೂ ಹೊಡೆದ್ರು..

★★★

ಗಂಡ: ಯಾರೇ ಅದು ನಿನ್ನ ಮೊಬೈಲ್‌ನಲ್ಲಿ 'ಐರನ್ ಮ್ಯಾನ್' ಅಂತ ಸೇವ್ ಮಾಡಿದಿಯಲ್ಲ.

ಹೆಂಡತಿ: ಅಯ್ಯೋ ಕರ್ಮ. ಅದು ಇಸ್ತ್ರೀ ಅಂಗಡಿಯವನ ನಂಬರ್ ರ್ರೀ...!

★★★

ಹೆಂಡತಿ: ಕುಡಿದಾಗ ನೀವು ತುಂಬ ಚೆನ್ನಾಗಿ ಕಾಣುತ್ತಿರಾ ನೋಡಿ.

ಗಂಡ: ನಾ ಇವತ್ತು ಕುಡಿದೇ ಇಲ್ಲ

ಹೆಂಡತಿ: ಆದ್ರ ನಾನು ಕುಡಿದೀನಲ್ರೀ..

ಮಾಣಿಕ: ಯಾಕೇ ಹೀಗೆ ಪೆಚ್ಚಾಗಿ ಕುಳಿತಿದ್ದಿ?

ಬಸವ: ನನ್ನ ಗರ್ಲ್ ಫ್ರೆಂಡ್ ಕೈಕೊಟ್ಟು ಹೋದಳು.

ಮಾಣಿಕ: ಹೋದ್ರೆ ಹೋಗಲಿ ಬಿಡು. ನಿನಗೇನು ಕಮ್ಮಿಯಾಗಿದೆ? ಇನ್ನೂ ಹತ್ತು ಹುಡುಗಿಯರು ಸಿಗುತ್ತಾರೆ

ಬಸವ: ಆಕೀ ಹತ್ತನೆಯವಳೆ ಕಣೋ...

★★★

ಗುಂಡ: ತಿಮ್ಮ ಬಹಳ ದಿನ ಆಯಿತು ನೀನು ಸ್ಕೂಲ್‌ಗೆ ಬರುತ್ತಿಲ್ಲಾ ಯಾಕೆ ಆರೋಗ್ಯ ಸರಿ ಇಲ್ಲವೇ?

ತಿಮ್ಮ: ಹಂಗೇನಿಲ್ಲ ನಮ್ಮಪ್ಪ ಹೇಳ್ಯಾರ್ ನಮಗೆ ಎಲ್ಲಿ ಮರ್ಯಾದೆ ಸಿಗಲ್ವೋ ಅಂತಲ್ಲಿ ಕಾಲು ಇಡಬಾರದು ಅಂತ. ಅದಕ್ಕೆ ಸ್ಕೂಲಿಗೆ ಬರುತ್ತಿಲ್ಲ.

■ ಶರದ ಕುಲಕರ್ಣಿ ಬೀದರ್


